## 35

# “ನಾನು ಕರ್ತನನ್ನು ನೋಡಿದ್ದೇನೆ!”

## (20:1-31)

ನಾನು ಕಾಲೇಜಿನಲ್ಲಿದ್ದಾಗ ಒಂದು ಸಲ ಇನ್ನೊಂದು ಪ್ರಾಂತ್ಯದಲ್ಲಿಯ ಯುವ ಜನರ ಕೂಟದಲ್ಲಿ ಕೆಲಸ ಮಾಡಲು ವಿದ್ಯಾರ್ಥಿಗಳ ಒಂದು ಗುಂಪಿನೊಂದಿಗೆ ಪ್ರಯಾಣ ಮಾಡುತ್ತಿದ್ದೆನು. ನಮ್ಮ ಅಂತಿಮ ಸ್ಥಳವನ್ನು ತಲುಪಲು ರಾತ್ರಿಯಲ್ಲಿ ವಾಹನದಲ್ಲಿ ಪ್ರಯಾಣ ಮಾಡುತ್ತಿದ್ದಾಗ, ನಮ್ಮ ವಿಶ್ವಾಸದ ಸ್ವಂತ ಪಯಣಗಳ ಬಗ್ಗೆ ಒಬ್ಬೊಬ್ಬರಾಗಿ ಹೇಳುತ್ತ ಸಮಯವನ್ನು ಕಳೆದವು. ವಾಹನದಲ್ಲಿದ್ದ ಕೆಲವರು ಕ್ರೈಸ್ತ ಮನೆಗಳಲ್ಲಿ ಬೆಳೆದವರು, ಇತರರು ತಮ್ಮ ಕುಟುಂಬಗಳಲ್ಲಿದ್ದ ಕ್ರೈಸ್ತರು ಮಾತ್ರ ಆಗಿದ್ದರು. ಕೆಲವರು ಸಂಶಯದಿಂದ ಬಹಳ ಸಮಯ ಹೋರಾಡಿದವರು ಮತ್ತು ಇತರರು ಹೋರಾಡಿದವರಾಗಿರಲಿಲ್ಲ. ಕೆಲವರು ಇತ್ತೀಚೆ ಗಷ್ಟೇ ಯೇಸು ಕ್ರಿಸ್ತನಿಗೆ ತಮ್ಮ ಜೀವಿತಗಳನ್ನು ಒಪ್ಪಿಸಿಕೊಟ್ಟವರಾಗಿದ್ದರು, ಇನ್ನೂ ಕೆಲವರು ಹತ್ತಕ್ಕಿಂತಲೂ ಹೆಚ್ಚು ವರ್ಷಗಳಿಂದ ಕ್ರೈಸ್ತರಾಗಿದ್ದರು.

ನಾವು ನಮ್ಮ ಕಥೆಗಳನ್ನು ಹಂಚಿಕೊಂಡಂತೆ, ಹೈಸ್ಕೂಲಿನ ಬಯೊಲೊಜಿ ಕ್ಲಾಸಿನಲ್ಲಿ ತನ್ನ ನಂಬಿಕೆಯನ್ನು ಕಳೆದು ಕೊಂಡಿದ್ದ ಒಬ್ಬ ಬಾಲಕಿಯು ಕೊಟ್ಟ ಹೇಳಿಕೆಯು ನನ್ನ ಮೇಲೆ ಅತೀ ಹೆಚ್ಚಾದ ಪ್ರಭಾವ ಬೀರಿತು. ದೇವರಲ್ಲಿ ಆಕೆಯ ನಂಬಿಕೆಯನ್ನು ಗೇಲಿ ಮಾಡಿದ ಒಬ್ಬ ಶಿಕ್ಷಕರಿಂದ ಭಯ ಹುಟ್ಟಿಸಿದ್ದರಿಂದ ಆಕೆಯು ನಂಬಿಕೆಗೆ ಇನ್ನೊಂದು ಅವಕಾಶ ಕೊಡುವದಕ್ಕಾಗಿ ಸುವಾರ್ತೆಗಳನ್ನು ಪುನಃ ಓದಲು ತೀರ್ಮಾನಿಸಿಕೊಂಡಳು “ಇದು ನಿಜವಾದದ್ದಾಗಿರುವುದೋ, ಇಲ್ಲವೇ ಯಾರಾದರೂ ರಚಿಸಿದ ಒಂದು ಉತ್ತಮವಾದ ಕಥೆಯಾಗಿರುವುದೋ? ಯೇಸು ಎಂಬ ಹೆಸರಿನ ಒಬ್ಬ ಮನುಷ್ಯನು ಎಂದಾದರೂ ಜೀವಿ ಸಿದ್ದನೋ? ಆತನು ಜೀವಿಸಿದ್ದರೆ, ಆತನು ನಿಜವಾಗಿಯೂ ದೇವರ ಕುಮಾರನಾಗಿದ್ದನೋ?” ಎಂದು ಆಕೆ ಆಶ್ಚರ್ಯಪಟ್ಟಳು, ದೀರ್ಘ ವಾದ ತಿಂಗಳುಗಳವರೆಗೆ ಆಕೆ ಈ ಪ್ರಶ್ನೆಗಳೊಂದಿಗೆ ಹೋರಾಡಿದಳು. ಅಂತಿಮವಾಗಿ ಆಕೆ ಸರಳ ವಾದ ಆದರೂ ಅಗಾಧವಾದ ತೀರ್ಮಾನಕ್ಕೆ ಬಂದಳು. ಸುವಾರ್ತಾ ಸಂದೇಶದ ಸಮರ್ಥತೆಯು ಪುನರುತ್ಥಾನದ ಸುತ್ತ ತಿರುಗುತ್ತದೆ ಎಂಬ ಗ್ರಹಿಕೆಗೆ ಆಕೆ ಬಂದಳು. ಯೇಸುವು ಸತ್ತವರೊಳಗಿಂದ ಎದ್ದು ಬಂದಿದ್ದರೆ ಆಗ ಇದೆಲ್ಲವೂ ಸತ್ಯವಾಗಿರುತ್ತದೆ: ಆತನು ಅದ್ಭುತಕಾರ್ಯಗಳನ್ನು ಮಾಡಿದನು, ಮತ್ತು ಆತನು ದೇವರ ಕುಮಾರನಾಗಿರುತ್ತಾನೆ. ಆತನು ಸತ್ತವರೊಳಗಿಂದ ಎದ್ದು ಬಾರದೇ ಇದ್ದರೆ, ಆಗ ಅದು ಕೇವಲ ಒಂದು ದಂತಕಥೆಯಾಗುತ್ತಿತ್ತು ಇಲ್ಲವೇ ಒಂದು ಭಯಂಕರವಾದ ವಂಚನೆಯಾಗುತ್ತಿತ್ತು.

ನನ್ನ ಸ್ನೇಹಿತನು ಸರಿಯಾಗಿದ್ದನು. ಸುವಾರ್ತೆಯ ಹೇಳಿಕೆಗಳು (ನಮ್ಮ ವಿಷಯದಲ್ಲಿ ಯೋಹಾನನ ಸುವಾರ್ತೆಯು) ಯೇಸುವಿನ ಪುನರುತ್ಥಾನದ ಸತ್ಯದ ಮೇಲೆ ನಿಲ್ಲುತ್ತವೆ ಇಲ್ಲವೇ ಬಿದ್ದು ಹೋಗುತ್ತವೆ. ಪೌಲನು ಈ ರೀತಿಯಲ್ಲಿ ಹೇಳಿದ್ದಾನೆ:

> ... [ದೇವರು] ಮುಂಚಿತವಾಗಿ ಪರಿಶುದ್ಧ ಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ಮಾತುಕೊಟ್ಟನು. ಈ ಸವಾರ್ತೆಯು ದೇವರ ಮಗನೂ ನಮ್ಮ ಕರ್ತನೂ ಆಗಿರುವ ಯೇಸು ಕ್ರಿಸ್ತನ ವಿಷಯವಾದದ್ದು. ಆತನು ವಂಶ ಕ್ರಮದಿಂದ ದಾವೀದನ ಸಂತಾನದಲ್ಲಿ ಹುಟ್ಟಿದವನೂ ಪರಿಶುದ್ಧವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತವಾಗಿ ಎದ್ದು

ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ (ರೋಮಾಪುರ 1:2-4).

ಈಗ ನಾವು ಯೋಹಾನನ ಪರಾಕಾಷ್ಠತೆಗೆ ಬರುವಾಗ - ನಂಬಿಕೆಯು ಈ ಸುವಾರ್ತೆಯ - ಯೇಸುವಿನ ಪುನರುತ್ಥಾನದ ಕಥೆಯನ್ನು ನಾವು ಎದುರಿಸುತ್ತೇವೆ. ಇದು ಅಲ್ಪವಾದ ವಿಷಯವಲ್ಲ, ಯಾಕಂದರೆ ಪ್ರತಿಯೊಂದು ಸಂಗತಿಯು ಪಂಥಕಟ್ಟುವಂಥದ್ದಾಗಿದೆ!

ಯೋಹಾನನಲ್ಲಿ ಪುನರುತ್ಥಾನದ ಪ್ರಸ್ತುತಪಡಿಸುವಿಕೆಯು ನೇರವಾದದ್ದು ಹಾಗೂ ಉತ್ಥಾನವಾದ ಕರ್ತನ ನಾಲ್ಕು ಭಿನ್ನವಾದ ಕಾಣಿಸಿಕೊಳ್ಳುವಿಕೆಗಳ ಸುತ್ತ ಸಂಘಟಿಸಲ್ಪಟ್ಟಿದ್ದು ಆಗಿದೆ, ಪ್ರತಿಯೊಂದು ಯಾವುದಾದರೂ ಹೊಸದಾದ್ದನ್ನು ಚಿತ್ರದಲ್ಲಿ ಪರಿಚಯಿಸುತ್ತದೆ. 20ನೆಯ ಅಧ್ಯಾಯದಲ್ಲಿ ಪ್ರಾರಂಭದಲ್ಲಿ ಪುನರುತ್ಥಾನವನ್ನು ಕುರಿತಾಗಿ ಪ್ರಶ್ನೆಗಳನ್ನು ಇತರರು ಕೈಕೊಳ್ಳುವದನ್ನು ಗಮನಿಸುತ್ತಿರುವ ನೋಟಕರಂತೆ ನಾವು ಯೋಚಿಸುತ್ತೇವೆ. ಅಧ್ಯಾಯದ ಅಂತ್ಯಕ್ಕೆ ಬರುವಾಗ, ಯೇಸುವಿನೊಂದಿಗೆ ನಾವು ಏನು ಮಾಡಬೇಕೆಂಬುದನ್ನು ತೀರ್ಮಾನಿಸುವವರಾಗಿ ಚಿತ್ರದ ಕೇಂದ್ರದಲ್ಲಿ ನಮ್ಮನ್ನು ಕಂಡುಕೊಳ್ಳುತ್ತೇವೆ!

## ಪುನರುತ್ಥಾನ ಹಾಗೂ ಮಗ್ದಲದ ಮರಿಯಳು (20: 1-18)

ಯೇಸುವು ಶಿಲುಬೆಗೆ ಹಾಕಲ್ಪಟ್ಟ ನಂತರದ ಭಾನುವಾರ ಪ್ರಾತಃಕ್ಕಾಲದಲ್ಲಿ, ಮಗ್ದಲದ ಮರಿಯಳು ಸಮಾಧಿಗೆ ಬಂದಾಗ ಇನ್ನೂ ಕತ್ತಲೆಯಿತ್ತು. ಸಮಾಧಿಯ ಬಾಗಿಲಿಗೆ ಮುಚ್ಚಿದ್ದ ಕಲ್ಲು ಇಲ್ಲದ್ದನ್ನು ಕಂಡು, ಆಕೆ ಪೇತ್ರ ಮತ್ತು ಯೋಹಾನರ ಬಳಿಗೆ ಓಡಿ ಬಂದಳು (ಯೋಹಾನನು "ಯೇಸುವು ಪ್ರೀತಿಸಿದ ಇನ್ನೊಬ್ಬ ಶಿಷ್ಯನಾಗಿದ್ದನು"). ಮತ್ತು ಅವರಿಗೆ, "ಸ್ವಾಮಿಯನ್ನು ಸಮಾಧಿಯೊಳಗಿಂದ ತೆಗೆದು ಕೊಂಡು ಹೋಗಿ ಆತನನ್ನು ಎಲ್ಲಿಟ್ಟಿದ್ದಾರೋ ನಮಗೆ ಗೊತ್ತಿಲ್ಲ" ಎಂದು ಹೇಳಿದಳು (20:2). ಪುನರುತ್ಥಾನದ ವಿಚಾರವು ಆ ಪ್ರಾತಃಕ್ಕಾಲ ಮರಿಯಳ ಮನಸ್ಸಿಗೆ ಹೊಳೆದಿರಲಿಲ್ಲ ಎಂದು ತೋರುತ್ತದೆ. ಆಕೆ ಯೇಸುವಿನಲ್ಲಿ ಭಕ್ತಿಯುಳ್ಳ ಹಿಂಬಾಲಕಳಾಗಿದ್ದರೂ, ಆಸಕ್ತಿಯಿಂದ ಆತನ ಬೋಧನೆಗಳನ್ನು ಕೇಳಿದ್ದರೂ ಆಕೆಗೆ ಈ ವಿಷಯ ಹೊಳೆಯಲಿಲ್ಲ, ಖಾಲಿಯಾದ ಸಮಾಧಿಯು ಆಕೆಗೆ ಸಾಧ್ಯವಾದ ವಿವರಣೆಯನ್ನು ಕೊಟ್ಟಿದ್ದು, ಯಾರೋ ಆತನ ದೇಹವನ್ನು ಕದ್ದುಕೊಂಡು ಹೋಗಿದ್ದಾರೆ ಎಂಬುದು.

ಮರಿಯಳು ಹೇಳಿದ್ದನ್ನು ಕೇಳಿ ಪೇತ್ರ ಮತ್ತು ಯೋಹಾನರು ಸಮಾಧಿಯ ಕಡೆಗೆ ಓಡಿ ಹೋದರು. ಇಬ್ಬರಲ್ಲಿ ಯೋಹಾನನು ತ್ವರಿತ ಗತಿಯಲ್ಲಿ ಹೋಗಿ, ಮೊದಲು ಸಮಾಧಿಯನ್ನು ತಲುಪಿ, ಪ್ರವೇಶದ ಬಳಿ ನಿಂತುಕೊಂಡನು. ಸಮಾಧಿಯ ಬಳಿಯಲ್ಲಿ ಪೇತ್ರನು ಅವನನ್ನು ಕೂಡಿಕೊಂಡಾಗ, ಪೇತ್ರನು ಒಳಗೆ ಹೋದನು. (ಇದು ಪೇತ್ರನ ವಿಶೇಷತೆಯಲ್ಲವೇ?) ನಾರು ಬಟ್ಟೆಗಳು, ಕೈಪಾವುಡವು ಸುತ್ತಿ ಬೇರೆ ಬೇರೆಯಾಗಿ ಇಡಲ್ಪಟ್ಟಿದ್ದನ್ನು ಇಬ್ಬರೂ ನೋಡಿದರು. ಈ ಹಂತದಲ್ಲಿ, ಯೋಹಾನನು ಸಮಾಧಿಯ ಒಳಗೆ ಪ್ರವೇಶಿಸಿದನು ಮತ್ತು ನಂಬಿದು. ಹೀಗಿದ್ದರೂ, ಮೆಸ್ಸೀಯನು ಸತ್ತವರೊಳಗಿಂದ ಎದ್ದು ಬರವನು ಎಂದು ಪರಿಶುದ್ಧ ಬರಹಗಳು ಹೇಗೆ ಬೋಧಿಸಿದವು ಎಂಬುದನ್ನು ಶಿಷ್ಯರು ಇನ್ನೂ ಅರ್ಥಮಾಡಿಕೊಳ್ಳಲಿಲ್ಲ. ಅದು ಪೇತ್ರನಿಗೂ ಯೋಹನನಿಗೂ ಗ್ರಹಿಸಿಕೊಳ್ಳಲು ಅತಿಶಯವಾದದ್ದಾಗಿತ್ತು.

ಇಬ್ಬರು ಶಿಷ್ಯರು ಮನೆಗೆ ಹಿಂದಿರುಗಿದ ನಂತರ ಮರಿಯಳು ಸಮಾಧಿಯ ಬಳಿಯಲ್ಲಿ ಉಳಿದು ಕೊಂಡಳು. ಅಳುತ್ತಾ ಇದ್ದಳು. ಆಕೆ ಯೇಸುವನ್ನು ಬಹಳವಾಗಿ ಪ್ರೀತಿಸಿದ್ದಳು ಮತ್ತು ಸಮಾಧಿ ಕಳ್ಳರು ಆಕೆಯ ನೋವಿಗೆ ಅವಮಾನ ಕೂಡಿಸಿದರು ಎಂದು ಆಕೆ ಯೋಚಿಸಿದಳು. ಆಕೆಯ ನೋವಿಗೆ ಅವಮಾನ ಕೂಡಿಸಿದರು. ಎಂದು ಆಕೆ ಯೋಚಿಸಿದಳು ಆಕೆ ತನ್ನ ಜೀವನದಲ್ಲಿ ಅದಕ್ಕಿಂತ ಹೆಚ್ಚು ಭಯಂಕರವಾದ ಪರಿಸ್ಥಿತಿಯನ್ನು ಕಲ್ಪಿಸಲಾರದವಳಾಗಿದ್ದಳು. ಆಕೆ ಅಳುತ್ತ ಇದ್ದಾಗ, ಯೇಸುವಿನ ತಲೆ ಮತ್ತು ಪಾದಗಳು ಮೊದಲು ಇಡಲ್ಪಟ್ಟಿದ್ದ

ಕಡೆಗಳಲ್ಲಿ ಇಬ್ಬರು ದೇವದೂತರು ಕಾವಲುಗಾರರಂತೆ ಕುಳಿತಿರುವದನ್ನು ನೋಡಿದಳು. ಅವರು ಆಕೆಯನ್ನು ಯಾಕೆ ಅಳುತ್ತಿರುವಿ ಎಂದು ಕೇಳಿದಾಗ ಆಕೆ, "ನನ್ನ ಸ್ವಾಮಿಯನ್ನು ತೆಗೆದುಕೊಂಡು ಹೋಗಿದ್ದಾರೆ, ಆತನನ್ನು ಎಲ್ಲಿ ಇಟ್ಟಿದ್ದಾರೋ ನನಗೆ ಗೊತ್ತಿಲ್ಲ" ಎಂದಳು (20:13).

ಕಥೆಯಲ್ಲಿ ಈ ಹಂತದಲ್ಲಿ ಯೇಸುವಿನ ದೇಹವು ಕಾಣೆಯಾಗಿದ್ದದ್ದು ಒತ್ತಿ ಹೇಳಲ್ಪಟ್ಟಿರುವದನ್ನು ಗಮನಿಸಿರಿ. ಇದು ಅಲ್ಪವಾದ ವಿವರಣೆಯಾಗಿರುವದಿಲ್ಲ. ಭವಿಷ್ಯದ ಸಂತತಿಗಳವರ ನಂಬಿಕೆಗಾಗಿ ಇದು ಪ್ರಮುಖವಾದ ಪುರಾವೆಯಾಗಿದೆ. ಯೋಹನ 20ನೆಯ ಅಧ್ಯಾಯವು ಅಪೊಸ್ತಲರ ಕೃತ್ಯಗಳಲ್ಲಿಯ ಮೊದಲಿನ ಅಧ್ಯಾಯಗಳೊಂದಿಗೆ ಓದಲ್ಪಡುವಾಗ, ಆದಿ ಸಭೆಯ ವಿರೋಧಿಗಳು ಕ್ರೈಸ್ತತ್ವವು ಪ್ರಸಾರವಾಗುವದನ್ನು ಹೇಗೆ ತಡೆಗಟ್ಟಬಹುದಿತ್ತು ಎಂಬುದನ್ನು ನಾವು ಸುಲಭವಾಗಿ ಗ್ರಹಿಸಿಕೊಳ್ಳುತ್ತೇವೆ: ಯೇಸುವಿನ ಮೃತ ದೇಹವನ್ನು ಅವರು ಒದಗಿಸುವದನ್ನು ಮಾಡಿದ್ದಾರೆ ಸಾಕಾಗುತಿತ್ತು. ತಕ್ಷಣವೇ ಕ್ರೈಸ್ತತ್ವವು ಬೆಳೆಯುವದನ್ನು ನಿಲ್ಲಿಸಬಹುದಿತ್ತು. ಅವರು ಹಾಗೆ ಮಾಡಕ್ಕಾಗಲಿಲ್ಲ. ಇಲ್ಲವೇ ಅವರು ಹಾಗೆ ಮಾಡಬಹುದಿತ್ತು. ದೇಹವು ದೊರಕದೇ ಇದ್ದದ್ದು ಯೇಸುವಿನ ಪುನರುತ್ಥಾನಕ್ಕೆ ಪ್ರಮುಖವಾದ ಪುರಾವೆಯಾಗಿದೆ!

ಮರಿಯಳು ತಿರುಗಿಕೊಂಡಾಗ, ಯೇಸುವನ್ನು ನೋಡಿದಳು. ಕೆಲವೊಂದು ಕಾರಣಕ್ಕಾಗಿ, ಬಹುಶಃ ಪ್ರಾತಃಕಾಲದ ಕತ್ತಲೆಯಿಂದ ಆತನು ಧರಿಸಿದ್ದ ಬಟ್ಟೆಯಿಂದ, ಇಲ್ಲವೇ ಆಕೆಯ ಕಣ್ಣೀರಿನಿಂದ, ಮರಿಯಳು ತಾನು ಯೇಸುವಿನ ಎದುರಿನಲ್ಲಿದ್ದೇನೆಂಬುದನ್ನು ತಿಳಿದುಕೊಳ್ಳಲಿಲ್ಲ. ಸಮಾಧಿಯಿದ್ದ ಸ್ಥಳದ ಮೇಲ್ವಿಚಾರಣೆಯಲ್ಲಿದ್ದ ತೋಟಗಾರನೆಂದು ಆತನ ಬಗ್ಗೆ ಯೋಚಿಸಿ, ಆತನನ್ನು ಬೇಡಿಕೊಂಡಳು, "ಅಯ್ಯಾ, ನೀನು ಆತನನ್ನು ಎತ್ತಿಕೊಂಡು ಹೋಗಿದ್ದರೆ ಎಲ್ಲಿ ಇಟ್ಟಿದ್ದೀ ನನಗೆ ಹೇಳು: ನಾನು ತೆಗೆದುಕೊಂಡು ಹೋಗುತ್ತೇನೆ" ಎಂದಳು (20:15). ಆಗ ಯೇಸುವು "ಮರಿಯಳೇ" ಎಂದು ಆಕೆಯ ಹೆಸರಿನಿಂದ ಕರೆದನು ತಕ್ಷಣವೇ ಆಕೆ ತಾನು ಉತ್ಥಾನವಾದ ಕರ್ತನೊಂದಿಗೆ ಮಾತಾಡುತ್ತಿರುವೆನೆಂದು ಮೊದಲ ಸಲ ತಿಳಿದುಕೊಂಡಳು.

ಯೇಸುವಿನ ತುಟಿಗಳ ಮೇಲೆ ತನ್ನ ಹೆಸರನ್ನು ಮರಿಯಳು ಕೇಳಿಸಿಕೊಂಡಾಗ ಆತನನ್ನು "ರಬ್ಬೂನಿ" ಎಂದು ಕರೆಯುವದರಿಂದ ಉತ್ತರ ಕೊಟ್ಟಳು ರಬ್ಬೂನಿ ಎಂಬುದು ಹಿಬ್ರುವಿನಲ್ಲಿ ಬೋಧಕನನ್ನು ಕರೆಯುವಂಥದ್ದಾಗಿದೆ. ಯೇಸುವು ಆಕೆಗೆ ತನ್ನನ್ನು ಹಿಡಿಯಬೇಡ ಎಂದು ಹೇಳಿದನು (ಬಹುಶಃ ಇದು ಕೇವಲ ದೈಹಿಕವಾದದ್ದಾಗಿರದೆ ಹೆಚ್ಚಾಗಿ ಭಾವನಾತ್ಮಕವಾದ ವಿಷಯವಾಗಿದೆ). ಯಾಕಂದರೆ ಆತನು ಇನ್ನೂ ತಂದೆಯ ಬಳಗೆ ಏರಿ ಹೋದವನಲ್ಲ (20:17). ತೋಟವನ್ನು ಬಿಟ್ಟು ಆಕೆ ಶಿಷ್ಯರ ಬಳಿಗೆ ಹೋಗಿ, "ನಾನು ಸ್ವಾಮೀಯವರನ್ನು ನೋಡಿದ್ದೇನೆ" ಎಂದು ಅವರಿಗೆ ಹೇಳಿದಳು (20:18). ಮಹಾ ಗುರುತಿನಲ್ಲಿ ಮರಿಯಳ ನಂಬಿಕೆಯು ಉತ್ಥಾನವಾದ ಕರ್ತನಲ್ಲಿ ನಂಬಿಕೆಯಾಯಿತು!

## ಪುನರುತ್ಥಾನದ ಮತ್ತು ಮೇಲಿನ ಕೋಣೆಯಲ್ಲಿ ಶಿಷ್ಯರು (20:19-24)

ಪುರುತ್ಥಾನದ ಭಾನುವಾರವು ಶಿಷ್ಯರಿಗಾಗಿ ದೀರ್ಘವಾದ, ಗಲಿಬಿಲಿಯ ದಿನವಾಗಿತ್ತು. ಆ ಸಾಯಂಕಾಲ ಅವರು ಮುಚ್ಚಿದ್ದ ಬಾಗಿಲುಗಳ ಹಿಂದೆ, ಯೇಸುವನ್ನು ಕೊಂದುಹಾಕಿದ ಯೆಹೂದಿ ನಾಯಕರ ಭಯದಿಂದ ಅಡಗಿಕೊಂಡಿದ್ದರು. ಮಗ್ದಲದ ಮರಿಯಳ ವರದಿಯು ಇನ್ನೂ ಮಾನಸಿಕವಾಗಿ ದುಃಖಗೊಂಡ ವ್ಯಕ್ತಿಯ ಹೇಳಿಕೆಗಳಂತೆ ತೋರಿತು. ಆತನ ದೇಹವು ಎಲ್ಲಿದೆಯೋ ಎಂಬುದು ಅವರಿಗೆ ತಿಳಿದಿರಲಿಲ್ಲ, ಆದರೆ ಅವರ ಹೃದಯಗಳಲ್ಲಿ ಯೇಸುವು ಸತ್ತು ಹೋಗಿದ್ದನು. ಈ ಹಂತದಲ್ಲಿ, ಭಯವು ತಮ್ಮ ಯಜಮಾನನು ಸತ್ತು ಹೋಗಿದ್ದ ಶಿಷ್ಯರ ಸ್ವಾಭಾವಿಕವಾದ ಸ್ಥಿತಿಯಾಗಿತ್ತು. ಇಂದೂ ಸಹ, ಕ್ರೈಸ್ತರು ಭಯದಲ್ಲಿ ಜೀವಿಸುತ್ತಿರುವರು, ತಮ್ಮ ಯಜಮಾನನು ಸಮಾಧಿಯಲ್ಲಿ ಉಳಿದುಕೊಂಡಿರುವನೋ ಎಂಬ ರೀತಿಯಲ್ಲಿ

ಜೀವಿಸುತ್ತಿರುವವರು.

ಮುಚ್ಚಿದ್ದ ಬಾಗಿಲುಗಳ ಹಿಂದೆ ಶಿಷ್ಯರು ಕೂಡಿ ಬಂದಿದ್ದಾಗ, ಯೇಸುವು ಥಕ್ಕನೇ ಕೋಣೆಯಲ್ಲಿ ಕಾಣಿಸಿಕೊಂಡನು. "ನಿಮಗೆ ಸಮಾಧಾನವಾಗಲಿ" (20:19) ಎಂಬ ಮಾತುಗಳಿಂದ ಆತನು ಅವರನ್ನು ವಂದಿಸಿದನು ಮತ್ತು ತನ್ನ ಕೈಗಳಲ್ಲಿಯ ಮತ್ತು ಪಾದಗಳಲ್ಲಿಯ ಗಾಯದ ಗುರುತುಗಳನ್ನು ತೋರಿಸಿದನು. ಶಿಷ್ಯರು ಆಶ್ಚರ್ಯಪಟ್ಟರು ಮತ್ತು "ಸ್ವಾಮಿಯನ್ನು ನೋಡಿದ್ದರಿಂದ ಸಂತೋಷಪಟ್ಟರು" (20:20). "ಸಮಾಧಾನ," "ಸಂತೋಷ" ಮತ್ತು "ಭಯ" ಎಂಬ ಪದಗಳು ನಂಬಿಕೆಯ ಹಿನ್ನೆಲೆಯಲ್ಲಿ, ಯೇಸುವು ತನ್ನ ಮರಣ ಮತ್ತು ಪುನರುತ್ಥಾನದ ಬಗ್ಗೆ ಮುಂತಿಳಿಸಿದ, ಯೋಹಾನನ ಸುವಾರ್ತೆಯಲ್ಲಿಯ ಮೊದಲಿನ ವಾಕ್ಯಭಾಗವನ್ನು ನೆನಪಿಸುತ್ತವೆ:

> ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ, ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ, ನಾನು ಹೋಗಿ ತಿರಿಗಿ ನಿಮ್ಮ ಬಳಿಗೆ ಬರುತ್ತೇನೆಂದು ನಿಮಗೆ ಹೇಳಿದ್ದನ್ನು ಕೇಳಿದಿರಿ. ನೀವು ನನ್ನನ್ನು ಪ್ರೀತಿಸುವವರಾಗಿದ್ದರೆ ನಾನು ತಂದೆಯ ಬಳಿಗೆ ಹೋಗುವ ವಿಷಯದಲ್ಲಿ ಸಂತೋಷಪಡುತ್ತಿದ್ದಿರಿ, ಯಾಕಂದರೆ ತಂದೆಯು ನನಗಿಂತ ದೊಡ್ಡವನು, ಅದೆಲ್ಲಾ ನಡೆಯುವಾಗ ನೀವು ನನ್ನನ್ನು ನಂಬುವಂತೆ ಅದು ನಡೆಯುವದಕ್ಕಿಂತ ಮುಂಚೆಯೇ ಈಗ ನಿಮಗೆ ಹೇಳಿದ್ದೇನೆ (14:27-29).

ಅಂತಿಮವಾಗಿ, ಪುನರುತ್ಥಾನದ ಸಾಯಂಕಾಲದಲ್ಲಿ ಮುಚ್ಚಿದ್ದ ಬಾಗಿಲುಗಳ ಹಿಂದೆ ಯೇಸುವು ಕಾಣಿಸಿಕೊಂಡಾಗ, ಶಿಷ್ಯರು ಆತನು ಒಬ್ಬ ಅದ್ಭುತವಾದ ಬೋಧಕನಿಗಿಂತ ಇಲ್ಲವೇ ಒಬ್ಬ ದೊಡ್ಡ ಪ್ರವಾದಿಗಿಂತ ಹೆಚ್ಚಿನವನಾಗಿದ್ದನು ಎಂದು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದರು; ಆತನು ಉತ್ಥಾನವಾದ ಮೆಸ್ಸೀಯನು, ದೇವರ ಕುಮಾರನು ಆಗಿದ್ದನು. ಅವರ ಭಯವು ಅದೃಶ್ಯವಾಗಲು ಪ್ರಾರಂಭಿಸಿತು, ಅವರ ಆನಂದವು ಹಿಂದಿರುಗಿತು, ಮತ್ತು ದೇವರ ಅದ್ಭುತಕರವಾದ ಸಮಾಧಾನವನ್ನು ಅನುಭವಿಸಲು ಪ್ರಾರಂಭಿಸಿದರು.

## ಪುನರುತ್ಥಾನ ಮತ್ತು ತೋಮನು (20:24-29)

ಇತರ ಹತ್ತು ಜನ ಶಿಷ್ಯರಿಗೆ ಯೇಸುವು ಕಾಣಿಸಿಕೊಂಡಾಗ ಅವರೊಂದಿಗೆ ತೋಮನು ಇರಲಿಲ್ಲ. ಅವನು ಹಿಂದಿರುಗಿದಾಗ, ಮರಿಯಳು ಮೊದಲು ಅವರಿಗೆ ಹೇಳಿದ್ದನ್ನು ಅವರು ಅವನಿಗೆ ಹೇಳಿದರು: "ನಾವು ಸ್ವಾಮಿಯನ್ನು ನೋಡಿದ್ದೇವೆ" (20:25). ತೋಮನು ಒಂದು ಸಲ ಯೇಸುವಿನಲ್ಲಿ ಬಲವಾಗಿ ನಂಬಿದ್ದರೂ,[1] ಕಥೆಯಲ್ಲಿ ಈ ಹಂತದಲ್ಲಿ ಅವನ ಹೃದಯವು ಕಠಿಣವಾಯಿತು ಮತ್ತು ಸಂದೇಹವುಳ್ಳದ್ದಾಯಿತು. ಒಂದು ಸಮಯದಲ್ಲಿ ಅವನು ವಾಸ್ತವಿಕತೆಯ ಬಗ್ಗೆ ಯೇಸುವಿನ ಪಾರಲೌಕಿಕ ದೃಷ್ಟಿಕೋನದಲ್ಲಿ ಬಾಗಿಯಾಗಲು ಧೈರ್ಯಗೊಂಡಿದ್ದನು, ಆದರೆ ನಿರಾಶೆಗಳು ಮತ್ತು ಆಳವಾದ ನೋವುಗಳು ಜಗತ್ತಿನ ಬಗ್ಗೆ ಭೂಲೋಕದ ದೃಷ್ಟಿಕೋನಕ್ಕೆ ಅವನು ಹಿಂದಕ್ಕೆ ಓಡಿಸಿದವು. "ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಘಾಯವನ್ನು ನೋಡಿ ಆ ಮೊಳೆಯ ಘಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದರೆ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ" (20:25) ಎಂದು ತೋಮನು ಪಟ್ಟು ಹಿಡಿದನು.

ತೋಮನನ್ನು ಅವನ ಅಪನಂಬಿಕೆಗಾಗಿ ಟೀಕಿಸುವುದು ಬಹಳ ಸುಲಭವಾಗಿರುವದಿಲ್ಲ. ಅವನು ವ್ಯಕ್ತಪಡಿಸಿದ ಭಾವನೆಗಳ ಬಗ್ಗೆ ನಾವೆಲ್ಲರೂ ಪರಿಚಿತರಾಗಿದ್ದೇವೆ. ಆ ತೀರ್ಮಾನವನ್ನು ಸುಲಭವಾಗಿ ತೆಗೆದು ಕೊಳ್ಳುವದಕ್ಕಾಗಿ ನಂಬುವದಕ್ಕೆ ನಮ್ಮ ನಿರ್ಣಯದ ಮೇಲೆ

ಬಹಳವಾದದ್ದು ಅವಲಂಭಿಸಿರುತ್ತದೆ. ಉತ್ಥಾನವಾದ ಕರ್ತನನ್ನು ನಾವೇ ನೋಡಲು ಮತ್ತು ಸ್ಪರ್ಶಿಸಲು ಬಯಸುತ್ತೇವೆ. ನಮ್ಮ ಸ್ವಂತ ಸಂಶಯಗಳನ್ನು ಎದುರಿಸಲು ತೋಮನು ನಮಗೆ ಸಹಾಯ ಮಾಡುತ್ತಾನೆ ಮತ್ತು ಅವುಗಳನ್ನು ದಾಟಿ ಹೋಗಲು ಅವನು ನಮಗೆ ಸಹಾಯ ಮಾಡುತ್ತಾನೆ.

ಎಂಟು ದಿನಗಳ ಅವಧಿಯವರೆಗೆ ತೋಮನು ಪುನಃ ಪುನಃ ತನ್ನ ಅಪನಂಬಿಕೆಯನ್ನು ವ್ಯಕ್ತಪಡಿಸಿದ ನಂತರ, ಶಿಷ್ಯರು ಬಾಗಿಲು ಮುಚ್ಚಿದ ಕೋಣೆಯಲ್ಲಿ ಕೂಡಿ ಬಂದಿದ್ದರು. ಈ ಸಮಯದಲ್ಲಿ, ಈ ಮೊದಲು ಕಾಣಿಸಿಕೊಂಡದ್ದಂತೆ ಯೇಸುವು ಕಾಣಿಸಿಕೊಂಡಾಗ ತೋಮನು ಅಲ್ಲಿದ್ದನು. ತೋಮನ ಸಂಶಯಗಳನ್ನು ಎದುರಿಸಿ, ಯೇಸುವು ಅವನಿಗೆ ತನ್ನ ಕೈಗಳನ್ನು ನೋಡಬೇಕೆಂದು, ತನ್ನ ಗಾಯದಕಲೆಗಳನ್ನು ಸ್ಪರ್ಶಿಸಬೇಕೆಂದು, ತನ್ನ ಪಕ್ಕೆಯಲ್ಲಿ ಕೈಯನ್ನಿಡ ಬೇಕೆಂದು ಹೇಳಿದನು. ಆಗ ತೋಮನು, "ನನ್ನ ಸ್ವಾಮಿ, ನನ್ನ ದೇವರು" (20:28) ಎಂದು ಅರಿಕೆ ಮಾಡಿದನು. ಯೋಹಾನನ ಇಡೀ ಸುವಾರ್ತೆಯಲ್ಲಿ ಯೇಸುವನ್ನು ಕರ್ತನೆಂದು ಮಾಡಿದ ಒಂದೇ ಒಂದು ಅತೀ ದೊಡ್ಡ ಅರಿಕೆಯಾಗಿದೆ. ಮತ್ತು ಒಮ್ಮೆ ಆಳವಾಗಿ ನಿರಾಶೆ ಹೊಂದಿದ ಸಂಶಯಪಡುತ್ತಿದ್ದವನ ಹಟಮಾರಿ ಹೃದಯದಿಂದ ಬಂದಿತು.

ತೋಮನ ಅರಿಕೆಯನ್ನು ಹಿಂಬಾಲಿಸಿ, ಇಂದು ನಮ್ಮ ಪರಿಸ್ಥಿತಿಯನ್ನು ವಿವರಿಸು ವಂಥದ್ದನ್ನು ಯೇಸುವು ಅವನಿಗೆ ಹೇಳಿದನು. "ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ, ನೋಡದೆ ನಂಬಿದವರು ಧನ್ಯರು" ಎಂದು ಆತನು ತೋಮನಿಗೆ ಹೇಳಿದನು (20:29). ತೋಮನಿಗಿದ್ದಂಥ ಪುರಾವೆಯು ನಮಗಿರಬೇಕೆಂದು ನಾವೆಲ್ಲರೂ ಬಯಸುತ್ತೇವೆ. ಆದರೆ ಅದು ಇಂದು ಅಸಾಧ್ಯವಾದದ್ದಾಗಿದೆ, ಯಾಕಂದರೆ ಯೇಸುವು ತಂದೆಯೊಂದಿಗಿರಲು ಏರಿ ಹೋಗಿದ್ದಾನೆ. ನಂಬಿಕೆಯು, ನಮಗೆ, ಬೇರೆಯದರ ಮೇಲೆ ಅವಲಂಭಿಸಿರತಕ್ಕದ್ದು. ತೋಮನಿಗೆ ಮತ್ತು ಇತರ ಶಿಷ್ಯರಿಗೆ ಮೊಳೆಗಳ ಕಲೆಗಳು ಏನಾಗಿದೆವೋ, ಅದು ಇಂದು ನಮಗೆ ಯೋಹಾನನ ಸುವಾರ್ತೆಯಾಗಿದೆ: ಉತ್ಥಾನವಾದ ಕರ್ತನನ್ನು ಸಂದರ್ಶಿಸಲು ಒಂದು ಮಾರ್ಗವಾಗಿದೆ. ನಾವು ಆತನನ್ನು ಮುಖಾಮುಖಿಯಾಗಿ ನೋಡದಿದ್ದರೂ, ಆತನ ಸಾಕ್ಷಿಗಳ, ಆತನ ಹೇಳಿಕೆಗಳ, ಆತನ ಬೋಧನೆಗಳ ಮತ್ತು ಲಿಖಿತ ದೇವರ ವಾಕ್ಯದ ಬಲದ ಮುಖಾಂತರ ಆತನನ್ನು ನಾವು ಸಂಧಿಸುತ್ತೇವೆ.

## ಪುನರುತ್ಥಾನ ಮತ್ತು ನಾವು (20:30, 31)

20:30, 31ರಲ್ಲಿ ಯೋಹಾನನ ಇಡೀ ಸುವಾರ್ತೆಗಾಗಿ ಉದ್ದೇಶದ ಹೇಳಿಕೆಯ ಕಡೆಗೆ ತಲುಪುತ್ತೇವೆ:

> ಯೇಸು ಇನ್ನು ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ, ಆದರೆ ಯೇಸು ದೇವರ ಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ.

ಯೇಸುವು ತನ್ನ ಶಿಷ್ಯರ ಮುಂದೆ ಅನೇಕ ಇತರ "ಸೂಚಕ ಕಾರ್ಯಗಳನ್ನು" ಮಾಡಿದನೆಂದು ಅವನು ಸರಳವಾಗಿ ಹೇಳಿದನು, ಆದರೆ ಈ ಸುವಾರ್ತೆಯಲ್ಲಿ ಬರೆಯಲ್ಪಟ್ಟ ಏಳು ಸೂಚಕ ಕಾರ್ಯಗಳು[2] ಭವಿಷ್ಯದ ಸಂತತಿಗಳಲ್ಲಿ ನಂಬಿಕೆಯನ್ನು ಹುಟ್ಟಿಸುವ ಉದ್ದೇಶಕ್ಕಾಗಿ ಕೂಡಿಸಲ್ಪಟ್ಟಿವೆ. ಈ ಸುವಾರ್ತೆಯ ಮುಖಾಂತರ ಯೇಸುವನ್ನು ಸಂಧಿಸುವವರು ಯೇಸುವು ಕ್ರಿಸ್ತನಾಗಿದ್ದಾನೆ, ದೇವರ ಕುಮಾರನಾಗಿದ್ದಾನೆ ಎಂದು ನಂಬುವದಕ್ಕೆ ಬರುವರು ಮತ್ತು ನಂಬುವದರಿಂದ ಆತನ ಹೆಸರಿನಲ್ಲಿ ಜೀವ ಹೊಂದುವರರು. ಯೋಹಾನ ಸುವಾರ್ತೆಯು ಒಂದು ಮಹತ್ವದ ಉದ್ದೇಶದಿಂದ ಒಂದು ವ್ಯಾವಹಾರಿಕ ಪುಸ್ತಕವಾಗಿದೆ.

ಎಲ್ಲಾ ನಾಲ್ಕು ಸುವಾರ್ತೆಗಳಲ್ಲಿ ಪುನರುತ್ಥಾನದ ವೃತ್ತಾಂತಗಳಲ್ಲಿ, ಯಾವುದೇ ದಾಖಲೆಯು ಯೇಸುವು ಸಮಾಧಿಯಿಂದ ಹೊರಗೆ ಬರುವದನ್ನು ನಿಜವಾಗಿ ಯಾರೂ ನೋಡಿಲ್ಲವೆಂದು ಸೂಚಿಸುತ್ತದೆ. ಆತನು ಕೊಲ್ಲಲ್ಪಡುವದನ್ನು ಅನೇಕರು ನೋಡಿದರು, ಮತ್ತು ಆತನ ಪುನರುತ್ಥಾನದ ನಂತರ ಅನೇಕರು ಆತನನ್ನು ನೋಡಿದರು, ಆದರೆ ಆತನು ಸಮಾಧಿಯನ್ನು ಬಿಟ್ಟು ಹೋಗುವದನ್ನು ಯಾರೂ ನೋಡಿರುವದಿಲ್ಲ. ಆದಿ ಶಿಷ್ಯರಂತೆ, ನಾವು ನಮ್ಮ ಸ್ವಂತ ತೀರ್ಮಾನಗಳನ್ನು ಮಾಡಿಕೊಳ್ಳಲಿಕ್ಕೆ ಬಿಡಲ್ಪಟ್ಟಿದ್ದೇವೆ. ಒಂದು ಸಲ ಆ ಕಾಲೇಜಿನ ನನ್ನ ಸ್ನೇಹಿತನು ಹೇಳಿದಂತೆ, "ಪ್ರತಿಯೊಂದು ಪುನರುತ್ಥಾನದ ಮೇಲೆ ಅವಲಂಭಿಸಿರುತ್ತದೆ. ಅದು ಸತ್ಯವಾಗಿದ್ದರೆ, ಆಗ ಅದೆಲ್ಲವೂ ಸತ್ಯವಾಗಿರುತ್ತದೆ. ಅದು ಒಂದು ಸುಳ್ಳಾಗಿದ್ದರೆ, ಆಗ ಅದರ ಪ್ರಯೋಜನ ಏನೂ ಇರುವದಿಲ್ಲ."

## ಮುಕ್ತಾಯ

ಮೊದಲೆಂದೂ ನಂಬದಿರುವವರಲ್ಲಿ ನಂಬಿಕೆಯನ್ನು ಹುಟ್ಟಿಸುವದಕ್ಕಾಗಿ ಇಲ್ಲವೇ ನಂಬಿಕೆಯು ಬಲಹೀನವಾಗಿ ಹೋಗುತ್ತಿರುವವರನ್ನು ಬಲಪಡಿಸುವದಕ್ಕೆ ಯೋಹಾನನು ತನ್ನ ಸುವಾರ್ತೆಯನ್ನು ಬರೆದನೋ ಎಂಬುದರ ಬಗ್ಗೆ ಪಂಡಿತರು ಬಹಳವಾಗಿ ಚರ್ಚಿ ಸಿದ್ದಾರೆ. "ನೀನು ನಂಬುವಂತೆ" ಎಂಬುದರ ಅರ್ಥ "ನೀವು ನಂಬಲಿಕ್ಕೆ ಪ್ರಾರಂಭಿಸುವಂತೆ" ಇಲ್ಲವೇ "ನೀವು ನಂಬುವದನ್ನು ಮುಂದುವರಿಸಲಿಕ್ಕಾಗುವಂತೆ" ಎಂದಾಗುವದೋ? ಯೋಹಾನನ ಸುವಾರ್ತೆಯಲ್ಲಿ ಇದು/ಇಲ್ಲವೇ ಅದು ಎಂಬ ಪ್ರಶ್ನೆಯಿರುವಾಗ, ಅತ್ಯುತ್ತಮವಾದ ಉತ್ತರವು "ಎರಡೂ" ಎಂದಿರುತ್ತದೆ. ಮೊದಲು ಯಾವುದೂ ಇಲ್ಲದವರಲ್ಲಿ ನಂಬಿಕೆಯನ್ನು ಹುಟ್ಟಿಸಲು ಯೋಹಾನನು ನಿಶ್ಚಯವಾಗಿಯೂ ಬರೆದಿರುತ್ತಾನೆ. ಅದೇ ಸಮಯದಲ್ಲಿ, ಈ ಸುವಾರ್ತೆಯಲ್ಲಿ ಬಹಳವಾದ್ದು, ದಣಿದವರ, ಹೋರಾಡುವವರ, ಬಲಹೀನರ ಇಲ್ಲವೇ ಕ್ರೈಸ್ತ ಸಮಾಜದಲ್ಲಿ ಭಯವುಳ್ಳ ವಿಶ್ವಾಸದ ಸಮಸ್ಯೆಗಳ ಕಡೆಗೆ ಸಂಬೋಧಿಸಲ್ಪಟ್ಟಿದೆ.

ಈ ಪಾಠವನ್ನು ಓದುವ ಕೆಲವರಿಗೆ, ನಂಬಿಕೆಯು ಕೇವಲ ಪ್ರಾರಂಭವಾಗಿರಬಹುದು. ಈ ಬೆಳೆಯುತ್ತಿರುವ ನಂಬಿಕೆಯ ಭಯಾನಕವಾದದ್ದಾಗಿರ ಬಹುದು. ಮತ್ತು ಅದೇ ಸಮಯದಲ್ಲಿ ಪುಳಕಿತರನ್ನಾಗಿ ಮಾಡುವಂಥದ್ದೂ ಆಗಿರಬಹುದು. ಇತರರಿಗೆ, ನಂಬಿಕೆಯು ಬಹಳವಾಗಿ ಭೂತಕಾಲದಲ್ಲಿರುತ್ತದೆ - ಒಮ್ಮೆ ಅದು ಸಜೀವವಾದದ್ದಾಗಿದ್ದು ಈಗ ಹೆಚ್ಚಾಗಿ ಸತ್ತು ಹೋದ ದ್ದಾಗಿರುತ್ತದೆ. *ಯೋಹಾನನ ಸುವಾರ್ತೆಯು ಎಂದೂ ನಂಬಿಕೆಯನ್ನು ತಿಳಿಯದವರಿಗಾಗಿ ಹಾಗೆಯೇ "ಮರೆಯಲು ಪ್ರಾರಂಭಿಸುವವರಿಗಾಗಿ" ಇರುತ್ತದೆ.*

ಯೇಸುವಿನ ಪುನರುತ್ಥಾನದ ಬಗ್ಗೆ ನಿನ್ನ ತೀರ್ಮಾನ ಏನಾಗಿರವುದು? ನೀನು ನಂಬುತ್ತೀಯೋ? ನೀನು ನಂಬುವಿಯೋ? ನೀನು ನಿನ್ನ ನಂಬಿಕೆಯನ್ನು ನವೀಕರಿಸುವಿಯೋ? ಈ ತೀರ್ಮಾನದ ಮೇಲೆ ಪ್ರತಿಯೊಂದು ಅವಲಂಭಿಸಿರುತ್ತದೆ!

---

ಟಿಪ್ಪಣಿಗಳು

[1]ಯೋಹಾನ 11:16 ತೋಮನು ಯೇಸುವಿಗೆ ಮೊದಲು ಭಕ್ತಿಯುಳ್ಳುವನಾಗಿದ್ದುದರ ಒಳ್ಳೇ ಉದಾಹರಣೆಯಾಗಿದೆ. [2]ಯೋಹಾನನ ಸುವಾರ್ತೆಯಲ್ಲಿಯ ಏಳು ಸೂಚಕ ಕಾರ್ಯಗಳು: ನೀರು ದ್ರಾಕ್ಷಾರಸವಾದದ್ದು (ಅಧ್ಯಾಯ 2); ಒಬ್ಬ ಪ್ರಧಾನನ ಮಗನನ್ನು ಗುಣಪಡಿಸಿದ್ದು (ಅಧ್ಯಾಯ 4); ಬೇತ್ಸಥಾ ಕೊಳದ ಬಳಿಯಲ್ಲಿಯ ರೋಗಿಯನ್ನು ವಾಸಿ ಮಾಡಿದ್ದು (5); ಐದು ಸಾವಿರ ಜನರಿಗೆ ಊಟ ಕೊಟ್ಟಿದ್ದು (6); ನೀರಿನ ಮೇಲೆ ನಡೆದದ್ದು (6); ಹುಟ್ಟು ಕುರುಡನಗೆ ದೃಷ್ಟಿಕೊಟ್ಟಿದ್ದು (9); ಮತ್ತು ಲಾಜರನನ್ನು ಸತ್ತವ ರೊಳಗಿಂದ ಎಬ್ಬಿಸಿದ್ದು (11). ಯೋಹಾನನ ಸುವಾರ್ತೆಯನ್ನು "ಏಳು ಸೂಚಕ ಕಾರ್ಯಗಳ ಮತ್ತು ಒಂದು ದೊಡ್ಡ ಸೂಚಕ ಕಾರ್ಯದ (ಪುನರುತ್ಥಾನದ) ಸುವಾರ್ತೆ ಎಂದು ಹೇಳುವುದು ಹೆಚ್ಚು ಯೋಗ್ಯವಾದದ್ದಾಗಿದೆ."